
## ಸಂಸ್ಕೃತಿಗೇ ಕುಠಾರಿಯಾದ ಐ.ಟಿ.

ಇತ್ತೀಚೆಗೆ ಮಾಹಿತಿ ತಂತ್ರಜ್ಞಾನದ ಉದ್ಯಮಿಗಳಿಗೂ ಕರ್ನಾಟಕ ಸರ್ಕಾರಕ್ಕೂ ಬೆಂಗಳೂರಿನಲ್ಲಿನ ಮೂಲಭೂತ ಸೌಕರ್ಯಗಳ ವಿಷಯದಲ್ಲಿ ಮನಸ್ತಾಪ ಉಂಟಾಯಿತು. ಆಗ ನಿಜವಾಗಿಯೂ ಈ ಐ.ಟಿ. ಉದ್ಯಮ ನಮ್ಮ ರಾಜ್ಯದ ಜನರಿಗೆ, ಅದರಲ್ಲೂ ಬೆಂಗಳೂರಿನವರಿಗೆ ವರವೋ ಇಲ್ಲ ಶಾಪವೋ ಎಂಬುದರ ಬಗ್ಗೆ **ವಿಜಯ ಕರ್ನಾಟಕ** ಪತ್ರಿಕೆ ಒಂದು ಅಂಕಣವನ್ನೇ ಆರಂಭಿಸಿತು.

ಕೈತುಂಬ ಹಣ ತರುವ ಐ.ಟಿ. ಉದ್ಯೋಗವು ವ್ಯಕ್ತಿಗಳಿಗೆ ಅರಿವಿಲ್ಲದಂತೆಯೇ ಅವರ ಬದುಕಿನಿಂದ ನೆಮ್ಮದಿ, ಸಂತೋಷಗಳನ್ನು ಅಪಹರಿಸಿಬಿಡುತ್ತದೆ. ಮನೆಯಲ್ಲಿ ಒಟ್ಟಿಗೆ ಕುಳಿತು ಊಟಮಾಡುವ ಸಣ್ಣ ಕೌಟುಂಬಿಕ ತೃಪ್ತಿಯೂ ಅಪರೂಪ ಎನ್ನುವಷ್ಟರಮಟ್ಟಿಗಾಗಿದೆ. ಆ ಕುಟುಂಬಗಳಿಗೆ ಹಣದ ಕೊರತೆಯಿಲ್ಲ, ಆದರೆ ಕೊರತೆಯಿರುವುದು ಕೌಟುಂಬಿಕ ನೆಮ್ಮದಿಯಲ್ಲಿ. ಮಗ ಬೆಳಗ್ಗೆ ಬೇಗನೆ ಮನೆ ಬಿಟ್ಟರೆ ಮತ್ತೆ ಹಿಂತಿರುಗುವುದು ಮಧ್ಯರಾತ್ರಿ. ಆ ವೇಳೆಗೆ ಎಲ್ಲರೂ ಊಟ ಮಾಡಿ ಮಲಗಿರುತ್ತಾರೆ. ಮಗನ ಪರಿಸ್ಥಿತಿ ಇದಾದರೆ ಸೊಸೆ ಕಾಲ್‌ಸೆಂಟರ್‌ಗೆ ಹೋಗುವುದರಿಂದ ರಾತ್ರಿಯೆಲ್ಲ ಕೆಲಸ ಮಾಡಿ, ಮನೆಗೆ ಬರುವುದೇ ಬೆಳಗಿನ ಜಾವ. ಆದ್ದರಿಂದ ವೃದ್ಧ ತಂದೆ ತಾಯಿಗಳ ಸಂಗಾತಿಗಳೆಂದರೆ ಕೇವಲ ಮೊಮ್ಮಕ್ಕಳು. ಹೀಗಾಗಿ ಗಂಡ-ಹೆಂಡತಿಯರ ನಡುವಿನ ಬಾಂಧವ್ಯವೇ ಇಲ್ಲದಾಗುತ್ತದೆ; ವೃದ್ಧರಿಗೆ ಮಗ-ಸೊಸೆಯರ ಸಂಪರ್ಕ ಇಲ್ಲದಾಗುತ್ತದೆ; ಮೊಮ್ಮಕ್ಕಳಿಗೆ ಅವರ ತಂದೆ ತಾಯಿಗಳ ಪ್ರೀತಿಯ ಸಂಬಂಧವೂ ಕಡಿತವಾಗುತ್ತದೆ. ಅದರಲ್ಲೂ ಆ ಮೊಮ್ಮಕ್ಕಳು ಕಂಪ್ಯೂಟರ್ ಮುಂದೆ ಕುಳಿತು ಕಾಲ ಕಳೆದರೆ ಮುಗಿಯಿತು, ವೃದ್ಧರಿಗಂತೂ ಬದುಕೇ ನೀರಸವಾಗುತ್ತದೆ.

ಐ.ಟಿ. ಉದ್ಯೋಗಸ್ಥರು ಹೆಚ್ಚಾಗಿ ವಾಸಮಾಡುವುದು ಅಪಾರ್ಟ್‌ಮೆಂಟ್‌ಗಳಲ್ಲಿ. ಅದು ಲಾಡ್ಜ್‌ನಲ್ಲಿ ವಾಸ ಮಾಡಿದಂತೆ. ಅಂತಹವರ ಮನೆ ಮುಂದೆ ತುಳಸೀಕಟ್ಟೆ ಇರುವುದಿಲ್ಲ; ರಂಗೋಲಿ ಇಡುವುದನ್ನು ಏನಿದ್ದರೂ ಟಿ.ವಿ.ಯಲ್ಲಿ ನೋಡಬೇಕು ಅಷ್ಟೆ. ಇನ್ನು ಹಬ್ಬ ಹರಿದಿನಗಳ ಆಚರಣೆಯಂತೂ ದೂರದ ಮಾತು. ಕಾರಣ ಅಮೆರಿಕದ ಮಾರುಕಟ್ಟೆಯನ್ನು ಅವಲಂಬಿಸಿ ಕೆಲಸ ಮಾಡುವುದರಿಂದ ಅವರಿಗೆ ಹಿಂದೂ ಹಬ್ಬಗಳಿಗೆ ರಜೆ ಸಿಗುವುದಿಲ್ಲ. ಕ್ರಿಸ್ಮಸ್ ಹಬ್ಬಕ್ಕೆ ಮಾತ್ರ ಒಂದು ವಾರ ರಜೆ ದೊರೆಯುತ್ತದೆ. ಆ ಒಂದು ವಾರದಲ್ಲಿ ಹೆಚ್ಚಾಗಿ ಗಳಿಸಿದ ಹಣವನ್ನು ಪಿಕ್ನಿಕ್, ಬಾರ್, ರೆಸಾರ್ಟ್‌ಗಳಲ್ಲಿ ಸುರಿದು ಮಜ ಮಾಡುವುದರ ಮೂಲಕ ತಮ್ಮ ಅಂತಸ್ತನ್ನು ಕಾಯ್ದುಕೊಳ್ಳುವ ಹವಣಿಕೆ ಬೇರೆ. ಇದರಿಂದಾಗಿ ಮನೆಯ ಮೇಲಾಗಲೀ ಕುಟುಂಬದ ಮೇಲಾಗಲೀ ಯಾವುದೇ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಳ್ಳುವ ಅಗತ್ಯವೂ ಅವರಿಗೆ ಕಂಡುಬರುವುದಿಲ್ಲ. ಇದೆಲ್ಲಕ್ಕಿಂತಲೂ ಆತಂಕಕಾರಿಯಾಗಿರುವುದು ಹಣ ಬಿಸಾಕಿದರೆ ಯಾವ ಕೆಲಸ ಬೇಕಾದರೂ ಆಗುತ್ತದೆ ಎಂಬ ಬಲವಾದ ಮನೋಭಾವದಿಂದಾಗಿ ಮಾನವೀಯತೆಗೆ ಸ್ಪಂದಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿರುವುದು. Money can buy you a bed, but not sleep (ಹಣದಿಂದ ನೀವು ಸುಪ್ಪತ್ತಿಗೆಯನ್ನು ಖರೀದಿಸಬಹುದು, ಆದರೆ ನಿದ್ರೆಯನ್ನಲ್ಲ) ಎನ್ನುವ ಇಂಗ್ಲಿಷಿನ ಹೇಳಿಕೆ ಈ ಭೀಕರ ಪರಿಸ್ಥಿತಿಗೆ ಕನ್ನಡಿ ಹಿಡಿದಂತೆ ಇದೆ. ಅಲ್ಲವೆ?




## ಹಿಂದೂ ಧರ್ಮ ಮತ್ತು ವಿಶ್ವವ್ಯಾಪಕತೆ

"All Religions are not the same" - ಇದು ಇತ್ತೀಚಿನ "Hinduism Today" ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ಲೇಖನದ ಶೀರ್ಷಿಕೆ. ಇದನ್ನು ಬರೆದವರು ತಾನು ಹಿಂದೂ ಎಂದು ಹೇಳಿಕೊಳ್ಳುವ ಡಾ. ಮೊರಾಲೆಸ್ ಎನ್ನುವವರು. ಅವರ ಪ್ರಕಾರ ವಿಶ್ವವ್ಯಾಪಕತೆ (Universalism) ಎನ್ನುವುದು ಹಿಂದೂಧರ್ಮದಲ್ಲಿ ಇರಲೇ ಇರಲಿಲ್ಲ. ಅದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಬಂದ ಭಾವನೆ. ಈ ಭಾವನೆಯನ್ನು ಹೊಂದಿರುವ ಒಂದೇ ಧರ್ಮ ಹಿಂದೂಧರ್ಮ. ಆದ್ದರಿಂದ ಹಿಂದೂ ಧರ್ಮವೇ ಎಲ್ಲ ಧರ್ಮಗಳಿಗಿಂತ ಶ್ರೇಷ್ಠ. ಹೀಗಾಗಿ ಎಲ್ಲ ಧರ್ಮಗಳೂ ಒಂದೇ ಆಗಲು ಸಾಧ್ಯವಿಲ್ಲದಿರುವುದರಿಂದ ವಿಶ್ವವ್ಯಾಪಕತೆಯ ಭಾವನೆಗೆ ಯಾವ ಅರ್ಥವೂ ಇಲ್ಲ. ಇದು ಆ ಲೇಖನದಲ್ಲಿನ ವಿಚಾರ ಸರಣಿ.

ಬೇಲಿಯೇ ಎದ್ದು ಹೊಲ ಮೇಯ್ದಂತೆ ಇದು. ಹಿಂದೂ ಧರ್ಮವನ್ನು ಆಧುನಿಕ ಯುಗದಲ್ಲಿಯೂ ಪ್ರಸ್ತುತವನ್ನಾಗಿ ಮಾಡಿರುವುದು ಅದರ ವಿಶ್ವಾತ್ಮಕ ಭಾವನೆಯೇ ಹೊರತು ಇದರಲ್ಲಿನ ಕಂದಾಚಾರಗಳಾಗಲಿ ಅಥವಾ ಮೂಢ ನಂಬಿಕೆಗಳಾಗಲಿ ಅಲ್ಲ. **ಏಕಂ ಸತ್ ವಿಪ್ರಾ ಬಹುಧಾ ವದಂತಿ**—"ಸತ್ಯ ಒಂದೇ, ಅದನ್ನು ತಿಳಿದವರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ" ಎನ್ನುವ ಐದು ಸಾವಿರ ವರ್ಷಗಳ ಹಿಂದಿನ ಋಗ್ವೇದದ ಸಂದೇಶವೇ ಭಾರತೀಯ ಸಂಸ್ಕೃತಿಯ ಮೂಲಸ್ರೋತ. ದೇವನೊಬ್ಬ ನಾಮ ಹಲವು ಎನ್ನುವ ಬಸವಣ್ಣನವರೇ ಇರಬಹುದು ಅಥವಾ ಭಾರತದ ಇತಿಹಾಸದಲ್ಲಿ ಆಗಿಹೋದ ಅಸಂಖ್ಯಾತ ಸಂತರು ಹಿಂದೂ ಧರ್ಮದ ವೈಶಾಲ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ನಮ್ಮಲ್ಲಿ ಕಾಣಬರುವ ವಿವಿಧ ಭಾವನೆಗಳು, ಸಂಪ್ರದಾಯಗಳು, ತಾತ್ವಿಕ ಅಭಿಪ್ರಾಯಗಳು– ಇವೆಲ್ಲವೂ ನಮ್ಮ ಸಂಸ್ಕೃತಿಯನ್ನು ಚಿರನೂತನವನ್ನಾಗಿ ಮಾಡಿವೆ. ಅತ್ಯಂತ ಪುರಾತನವಾಗಿದ್ದರೂ, ಇಂದಿಗೂ ಹಿಂದೂಧರ್ಮ ಉಳಿದು, ಬೆಳೆದು ಬಂದಿರುವುದಕ್ಕೆ ಇದೇ ಕಾರಣ. ಹೀಗಾಗಿ ವಿಶ್ವವ್ಯಾಪಕತೆಯೇ ಹಿಂದೂ ಧರ್ಮದ ಬೆನ್ನೆಲುಬು. ಅದಿಲ್ಲದಿದ್ದರೆ, ಅದು ಒಂದು ಮೂಲಭೂತ ಮತವಾಗಿ ಪರಿಣಮಿಸಿ, ಪ್ರಾಚೀನ ಈಜಿಪ್ಟ್ ಸಂಸ್ಕೃತಿಯಂತೆ ಎಂದೋ ಅಳಿಸಿಹೋಗುತ್ತಿತ್ತು.

ಹಿಂದೂಧರ್ಮಕ್ಕೆ ಆಧುನಿಕ ಯುಗದಲ್ಲಿ ಜೀವಂತಿಕೆಯನ್ನು ಪ್ರಸ್ತುತತೆಯನ್ನು ತಂದುಕೊಟ್ಟವರು ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು. ಶ್ರೀರಾಜಾಜಿ ಅವರು ಹೇಳುವಂತೆ ಹಿಂದೂ ಧರ್ಮವನ್ನು ಮತ್ತು ನಮ್ಮ ದೇಶವನ್ನು ಅಧಃಪತನದಿಂದ ರಕ್ಷಿಸಿದ ಮಹಾಚೇತನಗಳೇ ಅವರು.

ಹಿಂದೂಧರ್ಮದ ಸ್ವಂತಿಕೆ ಇರುವುದೇ ಈ ವಿಶ್ವವ್ಯಾಪಕತೆಯಲ್ಲಿ. ಹೀಗಾಗಿ ಅದರಿಂದ ಹಿಂದೂಧರ್ಮದ ಸ್ವಂತಿಕೆ ಅಳಿಸಿಹೋಗಲು ಹೇಗಾದರೂ ಸಾಧ್ಯ? ವಿಶ್ವವ್ಯಾಪಕತೆಯ ಭಾವನೆಯನ್ನು ಬಿಟ್ಟರೆ ಹಿಂದೂ ಧರ್ಮ ಬೇರೆ ಬೇರೆ ಮತಗಳಾಗಿ ಹರಿದು ಹಂಚಿ ಹೋಗಿ, ಸರ್ವನಾಶವಾಗಿಬಿಡುತ್ತದೆ. ವಿಶ್ವದಲ್ಲಿ ಕೇಳಿ ಬರುವ ಈ ಒಂದು ಉದಾರತೆಯ ವಾಣಿಯೂ ಅಡಗಿಹೋಗಿ ಸಂಘರ್ಷ, ಕಲಹಗಳಿಂದ ಇಡೀ ಪ್ರಪಂಚ ತಲ್ಲಣಿಸಿಬಿಡುತ್ತದೆ. ಹೀಗಾಗಲು ನಾವು ಅವಕಾಶ ನೀಡಬೇಕೇ?